# ನೂತನ ಅನ್ವೇಷಣೆ

## ಸ್ವಾಮಿ ವಿವೇಕಾನಂದರ ಭಾವಚಿತ್ರಗಳು



ಸ್ವಾಮಿ ವಿವೇಕಾನಂದರ ಈ ಎರಡು ಭಾವಚಿತ್ರಗಳು ಇತ್ತೀಚೆಗೆ, ಏಪ್ರಿಲ್, ೨೦೦೨ರಲ್ಲಿ, ಅಮೆರಿಕದ ಹಾಲಿವುಡ್ ವೇದಾಂತ ಸೊಸೈಟಿಯಲ್ಲಿ ಹೊಸದಾಗಿ ಸಿಕ್ಕಿದವುಗಳು. ಬಹುಶಃ ವಿವೇಕಾನಂದರ ಶಿಷ್ಯೆಯಾದ ಇಡಾ ಆ್ಯನ್‌ಸೆಲ್ (ಉಜ್ವಲ)ಳಿಂದ ಈ ಚಿತ್ರಗಳು ದೊರೆತಿರಬೇಕು. ಆಕೆ ೧೯೫೦ ರಲ್ಲಿ ಹಾಲಿವುಡ್ ಕೇಂದ್ರದಲ್ಲಿ ಬಂದು ನೆಲೆಸತೊಡಗಿದಳು. ೧೯೫೦ರಲ್ಲಿ ಆಕೆಯ ದೇಹತ್ಯಾಗವಾದಮೇಲೆ ಅವಳ ಸಾಮಾನುಗಳಿದ್ದ ಒಂದು ಪೆಟ್ಟಿಗೆ ಉಳಿದಿತ್ತು. ಆ ಪೆಟ್ಟಿಗೆಯಲ್ಲಿ ಈ ಎರಡು ಚಿತ್ರಗಳು ದೊರೆತವು.

ಈ ಚಿತ್ರಗಳು ೧೯೦೦ರಲ್ಲಿ ಸ್ಯಾನ್ ಫ್ರಾನ್ಸಿಸ್ಕೊದಲ್ಲಿ ತೆಗೆದಿರಬಹುದೆಂದು ನಾವು ಊಹಿಸಬಹುದು. ಚಿತ್ರಗಳ ಹಿನ್ನೆಲೆಯನ್ನು ಗಮನಿಸಿದಾಗ ಇವು ಸ್ಟುಡಿಯೋದಲ್ಲಿ ತೆಗೆದ ಚಿತ್ರಗಳಿರಬಹುದು ಎಂದೆನಿಸುತ್ತದೆ. ಈ ಚಿತ್ರಗಳ ಬಗ್ಗೆ ಯಾವ ವಿಶೇಷ ಮಾಹಿತಿಯೂ ನಮಗೆ ದೊರೆತಿಲ್ಲ. ಮುಂದೆ ಇವುಗಳ



ಬಗ್ಗೆ ಹೆಚ್ಚು ಮಾಹಿತಿ ದೊರೆಯಬಹುದು ಎಂದು ನಿರೀಕ್ಷಿಸಬಹುದಾಗಿದೆ.

ಎರಡೂ ಚಿತ್ರಗಳಲ್ಲಿ ಸ್ವಾಮೀಜಿಯವರ ಕಣ್ಣುಗಳು ತೆರೆದಿದ್ದರೂ ಯಾವುದೊ ಭಾವಪ್ರಪಂಚದಲ್ಲಿ ಅವರು ವಿಹರಿಸುತ್ತಿರುವಂತೆ ಕಂಡುಬರುತ್ತದೆ. ಈ ಜಗತ್ತಿನಲ್ಲಿ ಇದ್ದೂ ಇಲ್ಲದವರಂತೆ ಕಾಣುತ್ತಾರೆ. ಇವು ಅವರ ಮಹಾಸಮಾಧಿಗೆ ಎರಡು ವರ್ಷಗಳ ಮುಂಚೆ ತೆಗೆದ ಭಾವ ಚಿತ್ರಗಳು. ಆಗಲೇ ಈ ಜಗತ್ತಿನಿಂದ ನಿರ್ಗಮಿಸುವ ಸನ್ನಾಹದಲ್ಲಿ ಇರುವಂತೆ ಕಂಡುಬರುತ್ತದೆ. ಅಲೌಕಿಕ ಲೋಕದಿಂದ ಅವರಿಗೆ ಕರೆ ಬರುತ್ತಿರುವಂತೆಯೂ, "ಇಗೊ ಬರುತ್ತೇನೆ" ಎಂದು ಅವರು ಹೇಳು ತ್ತಿರುವಂತೆಯೂ ಭಾಸವಾಗುತ್ತದೆ.

ಸ್ಟುಡಿಯೊದಲ್ಲಿ ಚಿತ್ರ ತೆಗೆಯುತ್ತಿರುವಾಗಲೂ ಅವರಿಗೆ ತಮ್ಮ ಕಡೆ ಗಮನವಿರುವಂತೆ ಕಂಡುಬರುತ್ತಿಲ್ಲ. ಒಳ್ಳೆಯ ಉಡುಪನ್ನು ಧರಿಸಿದ್ದರೂ ದೇಹಭಾವ ಇರುವಂತೆ ಗೋಚರಿಸುವುದಿಲ್ಲ. ಅದ್ಭುತ ಅಲೌಕಿಕ ಪ್ರಭೆ ಅವರಲ್ಲಿ ಎದ್ದು ಕಾಣುತ್ತದೆ.

**ಇಂಥ ಅಲೌಕಿಕ ವ್ಯಕ್ತಿ ಈ ಲೋಕಕ್ಕಾಗಿ ಅಷ್ಟೊಂದು ಪರಿತಪಿಸಿದರಲ್ಲ! ಅಷ್ಟೊಂದು ಕಷ್ಟನಷ್ಟಗಳನ್ನು ಅನುಭವಿಸಿದರಲ್ಲ! ಇಡೀ ಜೀವನವನ್ನೇ ಅದಕ್ಕಾಗಿ ಸಮರ್ಪಿಸಿದರಲ್ಲ! ಈ ಲೋಕೋತ್ತರ ವ್ಯಕ್ತಿ ನಿಜವಾಗಿಯೂ ಲೋಕವಂದ್ಯರು.** ❒